MYSORE LEGISLATIVE ASSEMBLY

SIXTH DAY.

Saturday, the 26th February 1955.

The House met in the Assembly Hall, Old Public Offices, Bangalore, at Thirty-Minutes past Eight of the Clock.

MR. SPEAKER (SRI H. S. RUDRAPPA, B.SC., LL.B.) in the Chair.

QUESTIONS AND ANSWERS

Electric Power in Anekal Taluk (conversion to 50 cycles).

Q.—622. Sm. LAKSHMIDEVI RAMANNA (Hoskote-Anekal):—

Will the Government be pleased to state:—

(*a*) whether it has come to their notice that the raiyats that need electric power throughout Anekal Taluk for irrigation are put to inconvenience by non-supply of power owing to the existence of 25 cycle power station in that taluk ?

(*b*) whether steps will be taken to convert the above station into 50 cycles from this year alone ?

A.—Dr. R. NAGAN GOWDA (Minister for Agriculture).—

(*a*) It has not been possible in recent times to extend power supply to irrigation pumping sets in the area owing to the fully loaded condition of the present 25 cycle system.

(*b*) Steps have already been taken and it is expected that the conversion will be effected during the next official year.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—ಈಗಿರತಕ್ಕ 25 ಸೈಕಲ್ ಎದ್ಯುಚ್ಛಕ್ತಿ ಸ್ಟೇಷನ್ನಿಗೆ ಪರಮಾವಧಿ ಪ್ರಮಾಣದಷ್ಟು ಎದ್ಯುಚ್ಛಕ್ತಿ ಭರ್ತಿಯಾಗಿದೆಯೆಂದು ಉತ್ತರ ಹೇಳಿದ್ದೀರಿ. ಹೀಗೆ ಭರ್ತಿಯಾಗಿ ಎಷ್ಟು ವರ್ಷವಾಯಿತು !

*ಡಾ॥ ಆರ್. ನಾಗನಗೌಡ.—ಕೆಲವು ಕಾಲವಾಗಿದೆ, ಇಷ್ಟೇ ದಿವಸವಾಗಿದೆ ಎಂದು ಹೇಳುವುದಕ್ಕೆ ಕಷ್ಟವಾಗುತ್ತದೆ.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—ಈಗ ಎರಡು ಮೂರು ವರ್ಷಗಳಿಂದ ಅನೇಕರ್ ತಾಲ್ಲೂಕಿಗೆ ಹೊಸದಾಗಿ ವ್ಯವಸಾಯದ ಪಂಪುಗಳಿಗೆ ವಿದ್ಯುಚ್ಛಕ್ತಿ ಸರಬ್ರಾಜು ಮಾಡಿಲ್ಲ ಅಲ್ಲವೆ ?

ಡಾ॥ ಆರ್. ನಾಗನಗೌಡ.—ಮಾಡುವುದಕ್ಕೆ ಕಷ್ಟವಿದೆ.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—ಈಗಾಗಲೇ ಕಾರ್ಯಕ್ರಮ ಕೈಕೊಳ್ಳಲಾಗಿದೆ ಎಂದು ಹೇಳಿದ್ದೀರಿ, ಏನು ಕಾರ್ಯಕ್ರಮ ಕೈಕೊಂಡಿದ್ದೀರಿ ?

ಡಾ॥ ಆರ್. ನಾಗನಗೌಡ.—ಮೈಸೂರಿನಿಂದ ಬೆಂಗಳೂರಿಗೆ 50 ಸೈಕಲ್ ವಿದ್ಯುಚ್ಛಕ್ತಿಯನ್ನು ತರುವುದಕ್ಕೆ ಪ್ರಯತ್ನಮಾಡುತ್ತಿದ್ದೇವೆ; ಆಮೇಲೆ ಅಲ್ಲಿಂದ ಅನೇಕರ್ ಮತ್ತು ಹೊಸಕೋಟೆಗೂ ರ್ಯೆಹಾಕುವ ಯೋಚನೆಯೂ ಇದೆ.

ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣ.—ಇದಕ್ಕೆ ಇನ್ನೆಷ್ಟು ವರ್ಷ ಹಿಡಿಯುತ್ತದೆ ?

ಡಾ॥ ಆರ್. ನಾಗನಗೌಡ.—ವರ್ಷವಿಲ್ಲ, ಕೆಲವೇ ತಿಂಗಳಲ್ಲಿ ಕೆಲಸವಾಗಬಹುದೆಂದು ನನ್ನ ಭಾವನೆ.

Co-operative Credit Banks Steps to (start one in Tumkur District).

Q.—223. Sri T. G. THIMMEGOWDA (Tiptur).—

Will the Government be pleased to state:—

(*a*) the number of Co-operative Credit Banks in the State;

(*b*) whether there has been representation received from Co-operative Institutions and raiyats in Tumkur District to grant one for their District;

(*c*) whether they take immediate steps to start one in Tumkur District ?

A.—Dr. R. NAGAN GOWDA (Minister for Agriculture).—

(*a*) Four inclusive of one in Bellary District.

(*b*) Yes.

(*c*) Yes. Action is being taken to establish District Central Banks in all the Districts.

ಶ್ರೀ ಟಿ. ಜಿ. ತಿಮ್ಮೇಗೌಡ.—ಷೇರು ಮೊಬಲಗು ಎಷ್ಟು ವಸೂಲಾಗಿದೆ ?

* Indicates that the remarks have not been revised by the Member concerned.